ಬೆಂಗಳೂರು ನಗರದಲ್ಲಿ ಮಕ್ಕಳಿಗಾಗಿ ಮನರಂಜನಾ ಉದ್ಯಾನವನವನ್ನು ಮಾಡುವ ಬಗ್ಗೆ

೫೪. ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಬೆಂಗಳೂರು ನಗರದಲ್ಲಿ ಮಕ್ಕಳಿಗಾಗಿ ಮನರಂಜನಾ ಉದ್ಯಾನವನವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಬಿ) ಹಾಗಿದ್ದಲ್ಲಿ ಬೆಂಗಳೂರು ಆರಮನೆಯ ಉದ್ಯಾನವನವನ್ನು ಮಕ್ಕಳ ಉದ್ಯಾನವನವಾಗಿಯೂ ಮನರಂಜನಾ ಉದ್ಯಾನವನವನ್ನಾಗಿ ಪರಿವರ್ತಿಸುವ ಯಾವುದಾದರೂ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ?

ಸಿ) ಇಲ್ಲವಾದಲ್ಲಿ, ಬೆಂಗಳೂರು ಆರಮನೆಯ ಆವರಣವನ್ನು ಮನರಂಜನಾ ಉದ್ಯಾನವನವನ್ನಾಗಿ ಪರಿವರ್ತಿಸುವುದು, ಸರ್ಕಾರವು ಪರಿಶೀಲಿಸುವುದೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಎ) ಬೆಂಗಳೂರು ನಗರದ ಕಬ್ಬನ್ ಪಾರ್ಕಿನಲ್ಲಿರುವ ಜವಾಹರ್ ಬಾಲ ಭವನದಲ್ಲಿ ಮಕ್ಕಳ ಮನರಂಜನೆಯ ಸೌಲಭ್ಯ ಕಲ್ಪಿಸಲಾಗಿದೆ. ಮನರಂಜನಾ ಸೌಲಭ್ಯಗಳಾದ ಪುಟಾಣಿ ರೈಲು ಸವಾರಿ, ವಿದ್ಯುತ್ ಚಾಲಿತ ಕುದುರೆ ಮತ್ತು ರೈಲು ಜೈಂಟ್ ವೀಲ್, ಮೆರ್ರಿ — ಗೊ — ರೌಂಡ್ ಕುದುರೆ ಸವಾರಿ ದೋಣಿ ವಿಹಾರ, ರಂಗಮಂದಿರ ಮತ್ತು ಆಟದ ಸಲಕರಣೆಗಳನ್ನು ಜವಾಹರ್ ಬಾಲಭವನದಲ್ಲಿ ಅಳವಡಿಸಲಾಗಿದೆ.

ಬಿ) ಉದ್ಭವಿಸುವುದಿಲ್ಲ.

ಸಿ) ಬೆಂಗಳೂರು ಆರಮನೆ ಮೈದಾನವು ರಾಜ್ಯ ಸರ್ಕಾರದ ಸ್ವಾಧೀನದಲ್ಲಿ ಇಲ್ಲದಿರುವುದರಿಂದ ಅದನ್ನು ಮನರಂಜನಾ ಉದ್ಯಾನವನವನ್ನಾಗಿ ಪರಿವರ್ತಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

SCRAPPING OF THE PRESENT HOUSE RENT CONTROL ACT

56. SRI PERIKAL M. MALLAPPA (Chickpet).—Will the Minister for Revenue be pleased to State.

(a) whether the Government is aware that the present House Rent Control Act is only encouraging corruption and causing harassment to both landlords and tenants in Bangalore City.

(b) Whether there is any proposals before the Government to amend the existing House Rent Control Act, make it less combersome and useful to both land lords and tenants ?

SRI AZEEZ SAIT (Revenue Minister).—

a) No

b) Yes with a view to ensure more effective and purposeful implementation of the provisions of the Karnataka Rent Control Act in the State, Government had constituted a committee under the chairmanship of Smt. S. Premila, the then MLA in 1980 and the Committee had submitted its report in 1982. The report was subsequently referred to Joint Select Committee of the Legislature which ceased to exist consequent on dissolution of the then Assembly A fresh look into the recommendations of the committee would be taken.